ದಿನಾಂಕಃ13/11/2024 ಓ ಎಸ್.05/2020 ಡಿ ಡಬ್ಲ್ಯೂ 02

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ಈ ದಿನ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ

ಎಂದರೆ ಹೌದು. ನಾನು ವ್ಯವಸಾಯ ಕೆಲಸ ಮಾಡುತ್ತೇನೆ. ನನ್ನ ಜಮೀನು ಮಲ್ಲಾಪುರದ ಗೊಲ್ಲರಹಟ್ಟಿಯಲ್ಲಿ ಇದೆ. ಅದರ ಸರ್ವೆ ನಂಬರ್, ಅಳತೆ ಮತ್ತು ಚೆಕ್ ಬಂದಿ ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಮಾಡುವ ಜಮೀನು ನನ್ನ ತಾಯಿ ಹೆಸರಿನಲ್ಲಿದೆ. ಕೇಸು ಯಾರು ಯಾರ ಮೇಲೆ ಯಾಕೆ ಹಾಕಿದ್ದಾರೆ ನನಗೆ ಹೇಳಲು ಆಗುತ್ತೆ ದಾಸಪ್ಪನ ಮಗಳು ಕೇಸು ಹಾಕಿದ್ದಾರೆ. ಈ ವಿಷಯ ನನಗೆ ಚಿದಾನಂದ ಹೇಳಿದರು. ಯಾರ್ಯಾರ ವಿರುದ್ದ ಕೇಸು ಹಾಕಿದ್ದಾರೆ ಗೊತ್ತಾ ಎಂದರೆ ಇಲ್ಲ. ಆ ದಿನ ಸಾಕ್ಷಿಯಾಗಿ ಬರಲು ನನ್ನನ್ನು ದಾಸಪ್ಪನವರು ಕರೆದಿದ್ದರು. ಸಹಿ ಮಾಡುವ ಕಾಲಕ್ಕೆ ಪತ್ರದ ಬರವಣಿಗೆ ಆಗಿತ್ತು. ಪತ್ರ ಓದಿ ನಾನು ಸಹಿ ಮಾಡಿರುತ್ತೇನೆ. ಆಗ ನಾನು, ಗೋವಿಂದಸ್ವಾಮಿ, ರಾಜಪ್ಪ ಎನ್ನುವವರು ಪತ್ರಕ್ಕೆ ಮಾಡಿರುತ್ತೇವೆ. ಪತ್ರ ನನ್ನ ಮುಂದೆ ಬರೆದಿದ್ದಾರಾ ಎಂದರೆ ಹೌದು. ಆ ಬರವಣಿಗೆ ದಾಸಪ್ಪ ಮತ್ತು ಕೆಂಜೆಡಿಯಪ್ಪ ಬರೆಸಿದ್ದರು. ಯಾರು ಯಾರಿಗೆ ಎಷ್ಟು ಹಣ ಕೊಟ್ಟರು ಅದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 12 ರಿಂದ 13 ಜನ ಇದ್ದರು. ಇವರ ಪೈಕಿ ಸ್ವಲ್ಪ ಜನರ ಹೆಸರು ಮಾತ್ರ ನನಗೆ ಗೊತ್ತು. ಅವರು ದಾಸಪ್ಪ, ಕೆಂಜೆಡಿಯಪ್ಪ, ನಾನು, ಗೋವಿಂದ್ ಸ್ವಾಮಿ , ರಾಜಪ್ಪ, ಜಗನ್ನಾಥ ಇದ್ದರು. ಆ ಸಮಯದಲ್ಲಿ ನಾನು ದಾಖಲಾತಿ ನೋಡುವ ಪ್ರಯತ್ನ ನಾನು ಮಾಡಿಲ್ಲ. 04.12.2008 ರಂದು ಖರೀದಿ ಪತ್ರ ದಾಖಲೆ ಆಗಿರುತ್ತದೆ . ಕ್ರಯ ಆಗುವ ಸಮಯದಲ್ಲಿ ಜಮೀನಿನ ದಾಖಲಾತಿ ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಜಮೀನಿನ ಸರ್ವೆ ನಂಬರ್, ಆ ಚೆಕ್ ಬಂದಿ ಅಥವಾ ಅಳತೆ ಗೊತ್ತಿಲ್ಲ. ಈ ಕೇಸಿನ ವಾದಿ ಮತ್ತು ಪ್ರತಿವಾದಿ ನನಗೆ ಸಂಬಂದಿಕರು. ಅವರು ನನ್ನ ತಂದೆ ಕಡೆಯಿಂದ ಸಂಬಂದಿಕರು. ಪ್ರಮಾಣಪತ್ರ ನಾನೇ ವಕೀಲರಿಗೆ ಮಾಹಿತಿ ಕೊಟ್ಟು ಬರೆಸಿರುತ್ತೇನೆ. ದಾಸಪ್ಪ ಮತ್ತು ಅವರ ಮಗನಿಂದ ಶುದ್ದ ಕ್ರಯಪತ್ರಕ್ಕೆ ಪಡೆದಿರುತ್ತೇನೆ ಅಂತ ಬರೆಸಿದ್ದೇನೆ ಎಂದರೆ ಹೌದು. ಪ್ರಮಾಣಪತ್ರದಲ್ಲಿ ದಾಸಪ್ಪ ಮತ್ತು ಅವನ ಮಗನಿಂದ ಪಡೆದಿರುತ್ತೇನೆ ಅಂತ ಬರೆದಿದೆ ಅದು ಸರಿನಾ ಎಂದರೆ ಇಲ್ಲ ತಪ್ಪಾಗಿದೆ ಎಂದು ಹೇಳುತ್ತಾರೆ. ಹೇಳಿಕೆ ವ್ಯತ್ಯಾಸ ಇದೆ ಎಂದು ತಿದ್ದುಪಡಿ ಮಾಡಬೇಕು ಅಂತ ವಕೀಲರ ಹತ್ತಿರ ಹೇಳಿದ್ದೀರಾ ನಾನು ಸಹಿ ಮಾಡುವಾಗ ಅದನ್ನು ಗಮನಿಸಿಲ್ಲ. ಬೇರೆ ಬರವಣಿಗೆ ಓದಿ ಸಹಿ ಮಾಡುತ್ತೇನೆ. ಆಸ್ತಿ ಕೆಂಜೆಡಿಯಪ್ಪ ಸ್ವಾದೀನದಲ್ಲಿದೆ ಅಂತ ಹೇಳಿದ್ದು ಯಾವ ರೀತಿ ಸ್ವಾದೀನಲ್ಲಿದ್ದಾರೆ ಎಂದರೆ ಖರೀದಿ ಪತ್ರದ ಪ್ರಕಾರ. ಅವರು ಇರುವ ಸ್ವಾದೀನದ ಬಗ್ಗೆ ನಾನು ಹೋಗಿ ನೋಡಿರುತ್ತೇನೆ. ಅವರು

ಸ್ವಾದೀನದಲ್ಲಿ ಇರುತ್ತಾರೆ ಅಂತ ಹೇಳಿದ್ದು ಏನು ಬೆಳೆ ಹಾಕಿದ್ದಾರೆ ಎಂದರೆ ಮೆಕ್ಕೆ ಜೋಳ ಈಗ 3 ತಿಂಗಳ ಹಿಂದೆ ನಾನು ನೋಡಿ ಬಂದಿರುತ್ತೇನೆ. ಅವರು ಆ ಜಮೀನಿನಲ್ಲಿ ಸ್ವಾದೀನದಲ್ಲಿಲ್ಲ ಎಂದರೆ ಸುಳ್ಳು. ನಾನು ಮತ್ತು ವಾದಿ ವಿಶ್ವಾಸಿಕರು ಎಂದರೆ ಸಂಬಂದಿಕರು. ವಾದಿ ಮತ್ತು ನನಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಕೇಸನ್ನು ಹಾಕಿದ ನಂತರ ವಾದಿಯ ಹತ್ತಿರ ಮಾತನಾಡಿಸಿದ್ದೀರಾ ಎಂದರೆ ಇಲ್ಲ ಕಾರಣ ಕೇಸು ಹಾಕಿದ ನಂತರ ಮಾತನಾಡುತ್ತಾ ಇಲ್ಲ. ನಾನು ಕೂಡ ಕೇಸು ಹಾಕಿದ ನಂತರ ವಾದಿಯನ್ನು ಮಾತನಾಡಿಸುವ ಪ್ರಯತ್ನ ಮಾಡಿಲ್ಲ. ಕ್ರಯಪತ್ರದಲ್ಲಿ ದಾಸಪ್ಪ ಮತ್ತು ಅವರ ಮಗನ ವಯಸ್ಸು ನಮೂದು ಆಗಿಲ್ಲ ಎಂದರೆ ಸರಿ. ನಿಡಿ.4 ರ ಮೊದಲನೇ ಪೇಜ್ ನಲ್ಲಿ ಮತ್ತು 2 ನೇ ಪೇಜ್ ನಲ್ಲಿ ಬೇರೆ ಬೇರೆ ಎಸ್ ಆರ್ ನಂಬರ್ ಇದೆ ಎಂದರೆ ಒಂದು ಎಸ್ ಆರ್ ನಂಬರ್ ರೌಂಡ್ ಆಪ್ ಮಾಡಿದ್ದಾರೆ. ನಿಡಿ.4 ನ್ನು ದಿಃ 04.12.2008 ರಂದು 4.40 ಗಂಟೆಗೆ ಬರವಣಿಗೆ ಆಗಿದೆ ಎಂದರೆ ಹೌದು. ದಿಃ 28.06.2019 ರಂದು ನೊಂದಾಯಿಸಲಾಗಿದೆ ಅಂತ ಬರೆದಿದೆ ಎಂದರೆ ಹೌದು. ನಿಡಿ.4 ರಲ್ಲಿ ಎರಡು ಕಡೆ ನಾನು ಸಹಿ ಮಾಡಿರುತ್ತೇನೆ. ಮೊದಲನೇ ಸಹಿ ರಾಜಪ್ಪ ಎನ್ನುವವರದು ಇದೆ. ನಿಡಿ.4 ರ 2 ನೇ ಪುಟದಲ್ಲಿ ಸಹಿ ಮಾಡಿರುವ ವ್ಯಕ್ತಿಗಳೇ 4 ನೇ ಪುಟದಲ್ಲೂ ಕೂಡ ಸಹಿ ಮಾಡಬೇಕು ಎಂದರೆ ಹೌದು. ನಿಡಿ.4 ಕ್ಕೆ 3 ಜನ ಸಹಿ ಮಾಡಿದ್ದಾರೆ. ಬೇರೆ ವ್ಯಕ್ತಿಗಳ ಸಹಿ ಹೇಳಲು ಆಗಲ್ಲ. ನಿಡಿ.4 ಟೈಪ್ ಮಾಡಿದ್ದಾರೆ. ನಿಡಿ.4 ರಲ್ಲಿ ಸರ್ವೆ ನಂಬರ್ ಕೈಯಲ್ಲಿ ಬರೆದಿದ್ದಾರೆ ಅದು ಯಾರು ಬರೆದಿದ್ದಾರೆ ನನಗೆ ಹೇಳಲು ಆಗಲ್ಲ. ನನಗೆ ಈ ಕೇಸಿನ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಇದೇ ರೀತಿ ಹೇಳಬೇಕು ಅಂತ ನನಗೆ ಹೇಳಿದ್ದರಿಂದ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**

**ನ್ಯಾಯಾಧೀಶರು, ಚಿತ್ರದುರ್ಗ**